# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

**KARNATAKA STATE ROAD TRANSPORT CORPORATION**

ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ :: ಬೆಂಗಳೂರು :: Kempegowda Bus Station Division :: **Bengaluru-09**

ಸಂಖ್ಯೆ:ಕರಾಸಾ/ಕೆಂಬನಿ/ವಾ-1/ 1040 /2021-22

ದಿನಾಂಕ: 21/12/2021

**ಜಾಹೀರಾತು ಇ-ಟೆಂಡರ್ ಪ್ರಕಟಣೆ ಸಂಖ್ಯೆ : 01/2021-22 (ಇ-ಪ್ರಕ್ಯೂರ್‌ಮೆಂಟ್ ಮೂಲಕ)**

*******

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಕೆಂಪೇಗೌಡ ಬಸ್ ನಿಲ್ದಾಣ ವಿಭಾಗದ ವ್ಯಾಪ್ತಿಯಲ್ಲಿ ಬರುವ ಟ್ರಂಪೆಟ್ ಬಸ್ ನಿಲ್ದಾಣ, ದೇವನಹಳ್ಳಿ ಇಲ್ಲಿ ಗುರುತಿಸಿರುವ ಸ್ಥಳದಲ್ಲಿ ಜಾಹೀರಾತು ಫಲಕಗಳನ್ನು ಪ್ರದರ್ಶಿಸಲು ಪರವಾನಗಿದಾರರನ್ನು ಆಯ್ಕೆ ಮಾಡಲು ಇ-ಟೆಂಡರ್ ಕರೆಯಲಾಗಿದೆ. ಪರವಾನಗಿ ಅವಧಿಯು 05 ವರ್ಷಗಳಾಗಿದ್ದು, ಪರವಾನಗಿ ಶುಲ್ಕವು ಪ್ರತಿ ವರ್ಷ 10% ರಷ್ಟು ಹೆಚ್ಚಳದ ಷರತ್ತಿಗೆ ಒಳಪಟ್ಟಿರುತ್ತದೆ. **ಆಯ್ಕೆಗೊಂಡ ಪರವಾನಗಿದಾರರು ಗುರುತಿಸಲಾದ ಸ್ಥಳಗಳಲ್ಲಿ ಜಾಹೀರಾತು ಫಲಕಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿ ನಿರ್ಮಿಸಿ ಪ್ರದರ್ಶಿಸುವುದು.** ಪ್ರಸ್ತುತ ಇರುವ ಜಾಹೀರಾತು ಹೋರ್ಡಿಂಗ್ / ಫಲಕಗಳು ಹಾಲಿ ಇರುವ ಪರವಾನಗಿದಾರರ ಸ್ವತ್ತಾಗಿದ್ದು, ಸ್ಥಳ ಮಾತ್ರ ನಿಗಮದಾಗಿರುತ್ತದೆ. ಇ-ಟೆಂಡರ್ ದಸ್ತಾವೇಜುಗಳನ್ನು ಇ-ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.in ಮತ್ತು ನಿಗಮದ **ksrtc.karntaka.gov.in** ಅಂತರ್ಜಾಲದ ಮೂಲಕ ದಿನಾಂಕ **22/12/2021** ರಿಂದ **10/01/2022** ರವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದು.

**ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ788/2017 ಮತ್ತು 794/2018 ರಂತೆ ಇ-ಟೆಂಡರ್ ಗೆ ಒಳಪಡುವ ಜಾಹೀರಾತು ಫಲಕಗಳ ವಿವರ (ಇ-ಪ್ರಕ್ಯೂರ್ ಮೆಂಟ್ ಮೂಲಕ)**

**ದೇವನಹಳ್ಳಿ ಟ್ರಂಫೆಟ್ ಬಸ್ ನಿಲ್ದಾಣ**

| ಜಾಹೀರಾತು ಫಲಕಗಳ ವಿವರ | ವಿಸ್ತೀರ್ಣ ಚದರ ಅಡಿಗಳಲ್ಲಿ | ಅವಧಿ (ವರ್ಷ ಗಳಲ್ಲಿ) | ಮಾಸಿಕ ಮಿತವ್ಯಯ ೨ ಶುಲ್ಕ (₹) | ಇಎಂಡಿ(ರೂಗಳಲ್ಲಿ) ಇ-ಪ್ರೊಕೂರ್ ಮೆಂಟ್ ಮೂಲಕ (₹) | ಇಎಂಡಿ(ರೂಗಳಲ್ಲಿ) ಡಿ.ಡಿ. ಮೂಲಕ(₹) | ಅರ್ಜಿ ಶುಲ್ಕ ಜಿ.ಎಸ್.ಟಿ ಸೇರಿ ಡಿ.ಡಿ. ಮೂಲಕ ₹ | ಜಾಹೀರಾತು ಸ್ಥಳ ಲಭ್ಯವಾಗುವ ದಿನಾಂಕ |
|---|---|---|---|---|---|---|---|
| 1. 40' X 40' = 1600' X 1 ಫಲಕ X 2 ಬದಿ = 3200' ಚದರಡಿಗಳು.<br>2. 40' X 40' = 1600' X 1 ಫಲಕ X 2 ಬದಿ = 3200 ಚದರಡಿಗಳು.<br>3. 40' X 30' = 1200' X 1 ಫಲಕ X ಒಂದು ಬದಿ = 1200 ಚದರಡಿಗಳು.<br>4. ಮುಖ್ಯ ದ್ವಾರದ ಬಸ್ ಷೆಲ್ಟರ್ ಬಾರ್ಜ್‌ನಲ್ಲಿ 3' X 25' = 75' X ಒಂದು ಬದಿ X 4 ಫಲಕಗಳು = 300 ಚದರಡಿಗಳು<br>5. ಮುಖ್ಯ ದ್ವಾರದ ಎರಡು ಬದಿಯ 3 ಫಲಕಗಳು 3' X 4' = 12' = 72 ಚದರಡಿಗಳು. | 7972 | 05 | 421712 | 500 | 1264636 | 3540 | ಖಾಲಿ ಇದೆ |

**ಸೂಚನೆ:-**

1. ಸದರಿ ಜಾಹೀರಾತು ಪ್ರದರ್ಶನದ ಸಂಬಂಧ ಆಯ್ಕೆಯಾಗುವ ಬಿಡ್ಡುದಾರರು WP.42495/2019 ರಲ್ಲಿ ಉಚ್ಚನ್ಯಾಯಾಲಯವು ನೀಡುವ ತೀರ್ಮಾನಕ್ಕೆ ಬದ್ಧರಾಗಿರಬೇಕು ಹಾಗೂ ಕರಾರನ್ನು ರದ್ದುಪಡಿಸುವಂತೆ ತಿಳಿಸಿ ನೋಟೀಸ್/ಪತ್ರವನ್ನು ಜಾರಿ ಮಾಡಿದ ಒಂದು(01) ತಿಂಗಳೊಳಗಾಗಿ ಕರಾರನ್ನು ರದ್ದು ಪಡಿಸಲು ಸಿದ್ಧರಿರಬೇಕು.

2. ಸದರಿ ಪ್ರದೇಶದಲ್ಲಿ ಯಾವುದೇ ಕಾಮಗಾರಿ / ಮಾರ್ಪಾಡು ಕೈಗೊಳ್ಳಬೇಕಿದ್ದಲ್ಲಿ, ಕಡ್ಡಾಯವಾಗಿ ನಿಗಮದ ಪೂರ್ವಾನುಮತಿ ಪಡೆದು ನಿಗಮದ ಅಭಿಯಂತರರವರ ಮೇಲ್ವಿಚಾರಣೆಯಲ್ಲಿ ಕೈಗೊಳ್ಳಬೇಕಿರುತ್ತದೆ.

3. ಬಸ್ ಶೆಲ್ಟರ್ ಹಿಂಭಾಗದಲ್ಲಿರುವ 40' X 40' = 1600' X 1 ಫಲಕ X 2 ಬದಿ = 3200 ಚದರಡಿಗಳ Unipole Structure ನಿಗಮದಾಗಿರುತ್ತದೆ. ಆಯ್ಕೆಯಾದ ಪರವಾನಗಿದಾರರು ಸದರಿ Structure ನಲ್ಲಿ ಜಾಹೀರಾತು ಪ್ರದರ್ಶಿಸಬಹುದು. ಅವಧಿ ಮುಗದ ನಂತರ ಯಥಾಸ್ಥಿತಿಯಲ್ಲಿ ನಿಗಮದ ವಶಕ್ಕೆ ನೀಡುವುದು.

| ಕ್ರಸಂ | ವಿವರ | ದಿನಾಂಕ | ಸಮಯ |
|---|---|---|---|
| 1 | ಇ-ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ (ಇ-ಪ್ರಕ್ಯೂರ್ ಮೆಂಟ್ ಮೂಲಕ) | 10/01/2022 | 17-00 |
| 2 | ಇ-ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ಯಾವುದೇ ತಾಂತ್ರಿಕ ದೋಷ ಇಲ್ಲದಿದ್ದಲ್ಲಿ) | 12/01/2022 | 11-00 |
| 3 | ಇ-ಟೆಂಡರ್ EMD-DD ಅರ್ಜಿ ಶುಲ್ಕದ DD ಹಾಗೂ ಸಂಬಂಧಿಸಿದ ದಾಖಲಾತಿಗಳನ್ನು ವಿಭಾಗೀಯ ಕಛೇರಿಯಲ್ಲಿ ಸಲ್ಲಿಸಲು ಕೊನೆಯ ದಿನಾಂಕ (ಡಿ.ಡಿ ಗಳನ್ನು DC, KSRTC, KBS Division, Bengaluru ರವರ ಹೆಸರಿನಲ್ಲಿ ತೆಗೆಯುವುದು.) | 11/01/2022 | [illegible]-00 |

ಸದರಿ ಇ-ಟೆಂಡರ್ ಪ್ರಕಟಣೆಯ ಷರತ್ತು ಮತ್ತು ನಿಬಂಧನೆಗಳನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ, ಬೆಂಗಳೂರು-560009 ಇವರಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಲು ಕೋರಲಾಗಿದೆ.

**-:ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆಗಳು:-**

**1) ವಿಭಾಗೀಯ ಸಂಚಲನಾಧಿಕಾರಿ:7760990551, 2) ಸಹಾಯಕ ಸಂಚಾರ ವ್ಯವಸ್ಥಾಪಕರು(ವಾ):7760990554**

**Last date for submitting application : As per e-procurement portal.**
**Tender will be pened on : As per e-procurement portal.**
**Help Desk help line numbers : 23010900 / 23010901**

-ಸಹಿ-

ವಿಭಾಗೀಯ ನಿಯಂತ್ರಣಾಧಿಕಾರಿ,
ಕೆಂಪೇಗೌಡ ಬಸ್ ನಿಲ್ದಾಣ : ಬೆಂಗಳೂರು

**ಪ್ರತಿಯನ್ನು ಗೌರವಪೂರ್ವಕವಾಗಿ:**

1. ಆಪ್ತ ಕಾರ್ಯದರ್ಶಿಗಳು, ನಿರ್ದೇಶಕರು (ಭ ಮತ್ತು ಜಾ) ಕ.ರಾ.ರ.ಸಾ.ಸಂಸ್ಥೆ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸದರಿ ವಿಷಯವನ್ನು ಮಾನ್ಯ ನಿರ್ದೇಶಕರ ಗಮನಕ್ಕೆ ತರಲು ಕೋರಲಾಗಿದೆ.
2. ಮುಖ್ಯ ಸಂಚಾರ ವ್ಯವಸ್ಥಾಪಕರು(ವಾ), ಕ.ರಾ.ರ.ಸಾ.ಸಂಸ್ಥೆ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
3. ಮುಖ್ಯ ಗಣಕ ವ್ಯವಸ್ಥಾಪಕರು, ಕ.ರಾ.ರ.ಸಾ.ಸಂಸ್ಥೆ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು ಈ ಮೂಲಕ ಕಳುಹಿಸಲಾಗಿದೆ.

21.12.21

ವಿಭಾಗೀಯ ನಿಯಂತ್ರಣಾಧಿಕಾರಿ,
ಕೆಂಪೇಗೌಡ ಬಸ್ ನಿಲ್ದಾಣ : ಬೆಂಗಳೂರು.